ಕ್ರಿಕೆಟ್ ನೋಡುವವರನ್ನು ಲೆಕ್ಕ ಹಾಕಿದರೆ ಅವರೇ ಅಕ್ಷರಸ್ಥರಿಗಿಂತ ಹೆಚ್ಚಾಗಿದ್ದಾರೆ ಎಂದೊಬ್ಬ ಸ್ನೇಹಿತ ಹೇಳಿದ್ದು ಬಹುಶಃ ಸರಿಯಾಗಿರಬಹುದು. ಕ್ರಿಕೆಟ್‌ನ ಹೆಸರಲ್ಲಿ ದೇಶ ಒಂದಾಗಬಹುದು.

ಇತ್ತೀಚೆಗೆ ಪಡ್ಡೆ ಹುಡುಗರಲ್ಲಿ ಕ್ರಿಕೆಟ್‌ನ ಜೊತೆಯಲ್ಲಿ ಫುಟ್‌ಬಾಲ್‌ನ ಪ್ರೇಮವೂ ಹೆಚ್ಚಾಗಿ ಅದೊಂದು ಜಾತಿಯಾಗಿದೆ. ಮ್ಯಾಂಚೆಸ್ಟರ್ ಯುನೈಟೆಡ್, ಬಾರ್ಸಿಲೋನಾ, ಚೆಲ್ಸಿ, ರಿಯಲ್ ಮ್ಯಾಡ್ರಿಡ್ ಮುಂತಾದ ಕ್ಲಬ್‌ಗಳ ಬೆಂಬಲಿಗರಾಗಿ ಮೆಸ್ಸಿ, ಮೆರಡೋನಾ, ರೊನಾಲ್ಡೊ, ಸುನೀಲ್ ಚೆಟ್ರಿ ಮುಂತಾದವರ ಹೆಸರಿನಲ್ಲೇ ಕುಣಿದಾಡಿಬಿಡುತ್ತಾರೆ. ಇಲ್ಲಿ ಬೇರಾವ ಆಟಕ್ಕಿಂತ ಹೆಚ್ಚು ಹಣದ ಹೊಳೆ ಹರಿಯುತ್ತದೆ. ಮಧ್ಯರಾತ್ರಿಯ ಮ್ಯಾಚುಗಳನ್ನು ಮಕ್ಕಳು ಅಲಾರ್ಮ್ ಇಟ್ಟುಕೊಂಡು ನೋಡುತ್ತಾರೆ. ನನ್ನ ಮಗ ಒಮ್ಮೆ ರಾತ್ರಿ ಮೂರು ಗಂಟೆಗೆ "ಹೋ..." ಎಂದು ಕಿರುಚಿದ. ನಾವು ಗಾಬರಿಯಾಗಿ ಹೊರಬಂದೆವು. ಅಷ್ಟೇ ಅಲ್ಲ, ಅಕ್ಕ ಪಕ್ಕದ ಮನೆಯ ದೀಪಗಳು ಹೊತ್ತಿಕೊಂಡವು. ವಿಷಯವಿಷ್ಟೇ. ಮೆಸ್ಸಿ ಗೋಲ್ ಹೊಡೆದಿದ್ದ. ಈಗಂತೂ ನೂರಾರು ಫುಟ್‌ಬಾಲ್ ಪ್ರೇಮಿಗಳು ಸೇರಿ ಮೆಗಾಸ್ಕ್ರೀನಿನಲ್ಲಿ ಆಟದ ಮಜ ಸವಿಯಬಹುದು. ಸ್ಟೇಡಿಯಂನಲ್ಲಿ ಆಟವನ್ನು ನೋಡಿದ ಅನುಭವ ಪಡೆಯಬಹುದು.

ಇಸ್ಪೀಟು ಆಡುವವರದ್ದೂ ಕೊಂಚ ಭಿನ್ನ ಥರದ ಜಾತಿ. ಇಲ್ಲಿ ಬೇರೆಯೇ ಆದ ಪಥದಲ್ಲಿ ಹಣದ ಹೊಳೆ ಹರಿಯುತ್ತದೆ. ಆಟದ ಲೆಕ್ಕದಲ್ಲಿ, ಖುಷಿಗೆ ಆಡುವ ಮಟ್ಟದಲ್ಲಿ ಇದು ಸರಿ. ದುಡ್ಡು ಪಣಕ್ಕಿಟ್ಟು ಆಡಲಾರಂಭಿಸಿದರೆ ಮೂರೆಲೆ, ಹದಿಮೂರೆಲೆಗಳ ನಡುವೆ ಒಮ್ಮೊಮ್ಮೆ ಆಸ್ತಿಯೇ ಹರಾಜಾಗಿ ಹೋಗುತ್ತದೆ. ಇಲ್ಲಿಯೂ ಮೀಸಲಾತಿ ಇದೆ. ಅಪರೂಪಕ್ಕೊಮ್ಮೆ ಆಡುವವರ ಲೆಕ್ಕ ಬೇರೆ. ನಿತ್ಯ ಸಂಜೆಯಾದರೆ ಕ್ಲಬ್ಬಿನತ್ತ ಹೊರಡುವವರ ಕೆಟಗರಿ ಬೇರೆ. ಮದುವೆ ಮುಂತಾದ ಸಮಾರಂಭಗಳಲ್ಲಿ ಆಡುವವರ ಗುಂಪೇ ಬೇರೆ. ಅಲ್ಲಿ ಇವರಿಗೊಂದು ಕೋಣೆ ಕಾಯಮ್ಮಾಗಿರುತ್ತದೆ. ತಿಂಡಿ, ಕಾಫಿಗಳೆಲ್ಲ ಅಲ್ಲೇ ಸರಬರಾಜಾಗುತ್ತವೆ. ಒಮ್ಮೊಮ್ಮೆ ವರನ ತಂದೆ, ವಧುವಿನ ತಂದೆಯೇ ಎಲೆ ಹಿಡಿದು ಕುಳಿತಿರುತ್ತಾರೆ. ಅದು ಹೋಗಲಿ ಎಂದರೆ, ಒಮ್ಮೊಮ್ಮೆ ಪ್ರಮುಖ ಪಾತ್ರಧಾರಿಯಾದ ವರ ಹದಿಮೂರೆಲೆಗಳ ಕಿರೀಟ ತೊಟ್ಟು ಕುಳಿತಿರುತ್ತಾನೆ. ಮುಹೂರ್ತದ ಸಮಯಕ್ಕೆ ಒತ್ತಾಯದಿಂದ ಎಬ್ಬಿಸಬೇಕಾಗುತ್ತದೆ. ಹೀಗೇ ಪಣಕ್ಕಿಟ್ಟು ಆಡುತ್ತಿದ್ದ ವರನಿಗೆ ವಧು ಮೆಸೇಜ್ ಮಾಡಿದಳು. "ದುಡ್ಡು, ಆಸ್ತಿ ಪಣಕ್ಕಿಟ್ಟರೆ ಪರಿಣಾಮ ನೆಟ್ಟಗಾಗುವುದಿಲ್ಲ. ನಾನು ದ್ರೌಪದಿಯಲ್ಲ ಜೋಕೆ" ಎಂದಾಗ ಬೆವರಿದ ವರ ಆಟ ಬಿಟ್ಟೆದ್ದ. ಇನ್ನೊಂದು ಸಂದರ್ಭದಲ್ಲಿ ಮದುವೆ ಸಮಾರಂಭ ಮುಗಿದು ಮರುದಿನ ದೇವಿಯ ಪೂಜೆಯ ಗೊಂದಲ. ರಾತ್ರಿಯಿಡೀ ದೇವಿಯ ಕತೆ ಕೇಳುತ್ತ, ಉಪಾಸನೆ ಮಾಡುತ್ತ ಜಾಗರಣೆ ಮಾಡಬೇಕು. ಕೆಳಗೆ ದೇವಿಯ ಪೂಜೆ, ಕಥೆ ನಡೆದಿತ್ತು. ಮೇಲಿನ ಕೋಣೆಯಲ್ಲೂ ಜಾಗರಣೆ ನಡೆದಿತ್ತು. ರಾತ್ರಿಯಿಡೀ ಇಸ್ಪೀಟೆಲೆಗಳು ಕುಣಿದವು. ಬೆಳಗಿನ ಜಾವಕ್ಕೆ ಆರತಿಗೆ ಮಾತ್ರ ಬಂದವರು ಜಾಗರಣೆ ಮಾಡಿದ್ದೇ ಸೈ.

ಬರೀ ಆಟಗಳೇ ಆಯಿತಲ್ಲ. ಟೀವಿ ಧಾರಾವಾಹಿಗಳ ವಿಷಯಕ್ಕೆ ಬನ್ನಿ. ಇವುಗಳ ವೀಕ್ಷಕರದ್ದೊಂದು ಪ್ರತ್ಯೇಕ ಜಾತಿ. ಅದರಲ್ಲೂ ಸಂಜೆ ಒಂದರ ಅನಂತರ ಮತ್ತೊಂದು ಸರತಿಯ ಸಾಲಿನಂತೆ ಬರುವ ಧಾರಾವಾಹಿಗಳನ್ನು ಬಿಟ್ಟು ಏಳುವುದೇ ಕಷ್ಟ. ಸಂಜೆಯ ಅಡಿಗೆಗೆ ಅಡ್ಡಿ.

ನಿವೃತ್ತರು, ಹಿರಿಯರು, ಹೆಂಗಳೆಯರು ಪ್ರಮುಖ ವೀಕ್ಷಕರು. ಇಲ್ಲೂ ಮೀಸಲಾತಿ ಉಂಟು ಸ್ವಾಮಿ. ಆಯ್ದ ಧಾರಾವಾಹಿಗಳನ್ನು ನೋಡುವ ವರ್ಗ ಬೇರೆ. ಅವುಗಳಲ್ಲೂ ಮತ್ತೆ ಸಮಯ ಹೊಂದಾಣಿಕೆ. ಆಗಲೇ ಬರುವ ಹಿಂದಿ ಧಾರಾವಾಹಿಗಳನ್ನು ನೋಡಿ ಮರುದಿನ ಮಧ್ಯಾಹ್ನದ ರಿಪೀಟ್ ಟೆಲಿಕಾಸ್ಟ್‌ನಲ್ಲಿ ಕನ್ನಡ ಧಾರಾವಾಹಿಗಳನ್ನು ನೋಡುವವರದ್ದೊಂದು ಕೆಟಗರಿಯೇ. ಕ್ರಿಕೆಟ್ ಮುಂತಾದ ಮ್ಯಾಚುಗಳಿಗಾಗಿ ಟೀವಿ ಬಿಟ್ಟುಕೊಡಬೇಕಾದಾಗ, ಸಂಜೆ ಓದುವ ಹುಡುಗರಿದ್ದಾಗ